ಅ.ದಾ. ನಂ. 204/2018 ಪಿ.ಡಬ್ಲ್ಯೂ-1

ದಿನಾಂಕಃ 17.06.2025 ರಂದು ಪಿ.ಡಬ್ಲ್ಯೂ-1ರವರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲುಃ ಶ್ರೀ ಕೆ ಎನ್ ವಕೀಲರಿಂದಃ

1. ಸುನೀಲ್ ರವರ ಕಛೇರಿಗೆ ಯಾರನ್ನು ಕರೆದುಕೊಂಡು ಹೋಗಿರುತ್ತೇನೆ ಎಂದರೆ ಎರಡು ಸಾಕ್ಷಿದಾರರನ್ನು. ಸುನಿಲ್ ವಕೀಲರಿಗೆ ಮಾಹಿತಿಯನ್ನು ಯಾರು ನೀಡಿರುತ್ತಾರೆ ಎಂದರೆ ನನ್ನ ತಾಯಿ ಬೆಳಗ್ಗೆ 10.30 ರಿಂದ 11.30 ರವರೆಗೆ ಮಾಹಿತಿ ನೀಡಿರುತ್ತಾರೆ. ಮಾಹಿತಿ ನೀಡಿದ ಸಮಯದಲ್ಲಿ ಬರವಣಿಗೆ ಆಗಿದೆಯೇ ಎಂದರೆ ಸುನೀಲ್ ರವರು ಬರವಣಿಗೆ ಮಾಡಿರುತ್ತಾರೆ. ನಾನು ಮತ್ತು ಸಾಕ್ಷಿದಾರರು ಒಟ್ಟಿಗೆ ಕಛೇರಿಗೆ ಹೋಗಿರುತ್ತೇವೆ. ನಿಪಿ-9 ನ್ನು ಬೆರಳಚ್ಚು ಯಾರು ಮಾಡಿರುತ್ತಾರೆ ಎಂದರೆ ಸುನೀಲ್ ರವರು ಬೆರಳಚ್ಚುಗಾರರಿಗೆ ಹೇಳಿ ಮಾಡಿಸಿರುತ್ತಾರೆ. ಬೆರಳಚ್ಚನ್ನು ಕಂಪ್ಯೂಟರ್ ಅಥವಾ ಟೈಪಿಂಗ್ ಮಿಷಿನ್ ನಲ್ಲಿ ಮಾಡಿಸಿರುತ್ತಾರಾ ಎಂದರೆ ತುಂಬಾ ಜನಗಳು ಇದ್ದ ಕಾರಣ ಗಮನಿಸಿರುವುದಿಲ್ಲ. ಎಷ್ಟು ಜನರು ಇದ್ದರು ಎಂದರೆ 5 ರಿಂದ 6 ಜನರಿದ್ದರು. ನಿಪಿ-9 ಕ್ಕೆ ಬೆರಳಚ್ಚುಗಾರರು ಸಹಿ ಪಡೆದುಕೊಂಡಿದ್ದೀರಾ ಎಂದರೆ ಇಲ್ಲ. ಸದರಿ ಬೆರಳಚ್ಚುಗಾರರು ಯಾರು ಎಂದು ತಿಳಿದುಕೊಂಡಿದ್ದೀರಾ ಎಂದರೆ ಇಲ್ಲ.

2. ಆರೋಗ್ಯವಾಗಿರುವ ವ್ಯಕ್ತಿಯು ತನ್ನ ಹೆಬ್ಬೆರಳಿನ ಗುರುತನ್ನು ಸಾಮಾನ್ಯವಾಗಿ ನೇರವಾಗಿ ಹಾಕುತ್ತಾರೆ ಎಂದರೆ ಸರಿ. ಬಲ ಕೈನ ಹೆಬ್ಬೆರಳಿನಲ್ಲಿ ಹೆಬ್ಬೆಟ್ಟಿನ ಗುರುತು ಹಾಕಿದಾಗ ಹೆಬ್ಬೆರಳಿನ ತುದಿ ಪೇಪರ್ ನ ಎಡಭಾಗಕ್ಕೆ

ಬರುತ್ತದೆ ಎಂದರೆ ಸರಿ. ಸಾಕ್ಷಿಗೆ ನಿಪಿ–9 ನ್ನು ತೋರಿಸಲಾಗಿ ಅದರಲ್ಲಿರುವ ಹೆಬ್ಬೆಟ್ಟಿನ ಗುರುತು ಬಲಗೈನಲ್ಲಿ ಹಾಕಿರುವ ಹೆಬ್ಬೆಟ್ಟಿನ ಗುರುತಾಗಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ ನನ್ನ ತಾಯಿ ಹಾಕಿರುತ್ತಾರೆ. ನಿಪಿ–9 ರಲ್ಲಿರುವ ಹೆಬ್ಬೆಟ್ಟಿನ ಗುರುತುಗಳು ಬಲಗೈ ಹೆಬ್ಬೆರಳಿನ ಗುರುತುಗಳಲ್ಲ ಎಂದರೆ ಸರಿಯಲ್ಲ.

3. ಹೆಬ್ಬೆರಳಿನ ಗುರುತನ್ನು ಸಾಮಾನ್ಯವಾಗಿ ದಾಖಲಾತಿ ಬರೆದಿರುವ ವ್ಯಕ್ತಿಯು ಹೆಬ್ಬೆರಳಿನ ಗುರುತನ್ನು ಹಾಕಿದ ವ್ಯಕ್ತಿಯನ್ನು ಗುರ್ತಿಸುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ–9 ರಲ್ಲಿ ಹೆಬ್ಬೆರಳಿನ ಗುರುತನ್ನು ಯಾರು ಗುರ್ತಿಸಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

4. ನಿಪಿ–9 ರ ಸಾಕ್ಷಿದಾರರಾಗಿರುವ ಯೋಗೇಶ್ ರವರು ನಮ್ಮ ಮನೆಯಲ್ಲಿ ಕೆಲಸ ಮಾಡುವ ವ್ಯಕ್ತಿ ಎಂದರೆ ಸರಿಯಲ್ಲ. ಧರಣೇಶ್ ರವರಿಗೆ ನಾವು ಸುಮಾರು ವರ್ಷಗಳಿಂದ ಸಾಲ ನೀಡಿ ಸಹಾಯ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ಎಷ್ಟು ಕಡೆ ನನ್ನ ತಾಯಿ ಹೆಬ್ಬೆಟ್ಟಿನ ಗುರುತು ಹಾಕಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

5. ನನ್ನ ತಾಯಿ 2010 ನೇ ಇಸವಿಯಲ್ಲಿ ಎಡಗೈ ಪಾರ್ಶ್ವವಾಯುವಿನಿಂದ ಬಳಲುತ್ತಿದ್ದಾರೆ ಎಂದರೆ ಸರಿ. 2010 ನೇ ಇಸವಿಯಲ್ಲಿ ನನ್ನ ತಾಯಿ ಎಡಗೈನ ಸ್ವಾಧೀನ ಕಳೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. 2013 ನೇ ಇಸವಿಯಲ್ಲಿ ನನ್ನ ತಾಯಿಗೆ ಮೆದುಳಿಗೆ ಲಕ್ವಾ ಹೊಡೆದಿರುತ್ತದೆ ಎಂದರೆ ಸರಿಯಲ್ಲ. ಆದ ಕಾರಣ ನನ್ನ ತಾಯಿಗೆ ನೆನಪಿನ ಶಕ್ತಿ ಕಳೆದುಕೊಂಡು ಹಾಸಿಗೆ ಹಿಡಿದಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ

1ನೇ ಪ್ರತಿವಾದಿ ನನ್ನ ತಾಯಿ ಸೇವೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ನನ್ನ ತಾಯಿಯನ್ನು ಮಂಗಳೂರು ಮತ್ತು ಹಾಸನ ಆಸ್ಪತ್ರೆಗಳಲ್ಲಿ ತೋರಿಸಿ ಚಿಕಿತ್ಸೆ ಕೊಡಿಸಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-9 ರಲ್ಲಿ ಪಂಚೇಂದ್ರಿಯಗಳು ನಮೂದಾಗಿದ್ದು ಸದರಿ ಪದದ ಅರ್ಥ ತಿಳಿದುಕೊಂಡಿದ್ದೀರಾ ಎಂದರೆ ಹಾಗೆಂದು ನಮೂದಿಸಿರುವುದಿಲ್ಲ. 2013 ರಿಂದ 2018 ರವರೆಗೂ ನನ್ನ ತಾಯಿಗೆ ಕಣ್ಣು ಕಾಣಿಸುತ್ತಿರಲಿಲ್ಲ, ನಾಲಿಗೆ ಸರಿಯಾಗಿ ಆಡುತ್ತಿರಲಿಲ್ಲ, ಚರ್ಮದ ಸ್ತಿಮಿತವನ್ನು ಸಹ ಕಳೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-9 ಆದ ಸಮಯದಲ್ಲಿ ನನ್ನ ತಾಯಿಯ ಪಂಚೇಂದ್ರಿಯಗಳು ಸರಿಯಾಗಿ ಇರಲಿಲ್ಲ ಎಂದರೆ ಸರಿಯಲ್ಲ.

6. ನಿಪಿ-9 ನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-9 ಕ್ಕೆ ನನ್ನ ತಾಯಿ ಹೆಬ್ಬೆಟ್ಟಿನ ಗುರುತು ಹಾಕಿರುವುದಿಲ್ಲ ಎಂದರೆ ಸರಿಯಲ್ಲ.

7. ದಿಃ 08-12-2008 ರಂದು ನನ್ನ ತಾಯಿ 1ನೇ ಪ್ರತಿವಾದಿಗೆ ನೊಂದಾಯಿತ ಮರಣ ಶಾಸನ ಪತ್ರವನ್ನು ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮರಣ ಪ್ರಮಾಣ ಪತ್ರವನ್ನು ರದ್ದುಗೊಳಿಸಿದ್ದೀರಾ ಎಂದರೆ ಇಲ್ಲ. ಸದರಿ ಮರಣ ಶಾಸನ ಪತ್ರದ ಆಧಾರದ ಮೇಲೆ 1ನೇ ಪ್ರತಿವಾದಿಗೆ ದಾವಾ ಸ್ವತ್ತಿನ ಮೇಲೆ ಹಕ್ಕು ಮಾಲೀಕತ್ವ ಬಂದಿರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ನಿಪಿ-9 ನ್ನು ಸೃಷ್ಟಿಸಿ ಈ ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-9 ರಲ್ಲಿ ಇರುವ ಹೆಬ್ಬೆಟ್ಟಿನ ಗುರುತು ನನ್ನ ತಾಯಿ ಹಾಕಿರುವ ಹೆಬ್ಬಿಟ್ಟಿನ ಗುರುತು ಅಲ್ಲ ಎಂದರೆ ಸರಿಯಲ್ಲ.

(2ನೇ ಪ್ರತಿವಾದಿ ಪರ ವಕೀಲರು ಗೈರು ಹಾಜರಾಗಿರುವ ಕಾರಣ ಪಾಟೀ ಸವಾಲಿಗೆ ಕಾಲಾವಕಾಶ ನೀಡಲು ಯಾವುದೇ ಸಕಾರಣಗಳು ಇರುವುದಿಲ್ಲ.

(ಮರು ವಿಚಾರಣೆ ಇರುವುದಿಲ್ಲ.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಶ್ರೀಮತಿ ಸ್ನೇಹಾ ಎಂ.)
ವ್ಯವಹಾರ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ., ಆಲೂರು.